Registered Number M. 1289/ SATYAVADI (Founded 1917) Every Evening

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 28 ಸಂಚಿಕೆ 284] ಶನಿವಾರ 11-8-45 [3 ಪೈ

ಶ್ರೀ ಜಗದ್ಗುರು ಸೋಮಯಾಜಿಗಳ ಶತಮಾನೋತ್ಸವ

' ಶ್ರೀ ಜಗದ್ಗುರು ಲಕ್ಷ್ಮೀನರಸಿಂಹ ಸೋಮಯಾಜಿಯವರ ಶತನಾನೋತ್ಸವವನ್ನು ಮೈಸೂರು ವೈಶ್ಯ ಯುವಜನ ಸಹಾಸಭೆಯ ಆಶ್ರಯದಲ್ಲಿ ತಾ. 29-9-45 ರಿಂದ ಅಕ್ಟೋಬರ್ 5 ದಿನಗಳವರೆಗೆ ಆಚರಿಸಲಾಗುತ್ತದೆ. ಇದಕ್ಕೆ ಅಭಿಮಾನಿಗಳಾದ ವೈಶ್ಯ ಮಹನೀಯರೆಲ್ಲರೂ ಪ್ರತಿಯೊಬ್ಬರೂ ಒಂದು ನೂರು ಕಾಲಾಣೆ (1-9-0) ಗಳಿಗೆ ಕಡಿಮೆಯಿಲ್ಲದಂತೆ ಸಂಘದ ಕಾರ್ಯದರ್ಶಿಗಳಿಗೆ ಕಳುಹಿಸಬೇಕಾಗಿ ಪ್ರಾರ್ಥನೆ ' ಎಂದು ಸಮಿತಿಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಸಂಸ್ಥಾನಗಳ ಪ್ರಜಾ ಸಂಸ್ಥಾ ಸಭೆ

ಕಳೆದ ತಾರೀಖು 2 ರಲ್ಲಿ ಜವಾಹರಲಾಲರ ಅಸ್ವಸ್ಥತೆಯಿಲ್ಲಿ ಶ್ರೀ ನಗರದಲ್ಲಿ ಅಖಿಲ ಭಾರತ ಸಂಸ್ಥಾನಗಳ ಪ್ರಜಾ ಸಮ್ಮೇಳನಗಳ ಸ್ಥಾಯಿ ಸಮಿತಿ ಸಭೆ ಸೇರಿದ್ದಿತು. ಜವಾಬ್ದಾರಿ ಸರ್ಕಾರವನ್ನು ಸಂಸ್ಥಾನಗಳಲ್ಲಿ ಸ್ಥಾಪಿಸುವ ವಿಷಯದಲ್ಲಿ ರಾಜ ಮಹಾರಾಜರುಗಳು ಸಹಕರಿಸಿ ಸಾಯಾದ ವ್ಯವಸ್ಥೆಯಾಗಬೇಕೆಂದು ತೀರ್ಮಾನಿಸಲಾಯಿತು.

ಸಂಸ್ಥಾನಗಳ ಪ್ರಜಾ ಸಮ್ಮೇಳನ ಸಂಸ್ಥೆಯನ್ನು ಸರಿಯಾಗಿ ನೋಡಿಕೊಳ್ಳಲು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಗೆ ಮೈಸೂರಿನ ಭಾಷ್ಯಂಡವರು ಸದಸ್ಯರಾಗಿರುವರು. ಈ ಸಮಿತಿಯ ಕಾರ್ಯನಿರತ ಕಾರ್ಯದರ್ಶಿ ಶ್ರೀ ಜೈನಾರಾಯಣ ವ್ಯಾಸರು ಈ ಬಗ್ಗೆ ಜೋಧಪುರದಲ್ಲಿ ಕಛೇರಿ ತೆಗೆಯುವರು.

ಆಗಸ್ಟ್ ೯ ರ ದಿನಾಚರಣೆ

ಆಗಸ್ಟ್ ತಾ. ೯ ರ ದಿನಾಚರಣೆಯ ಸಂಬಂಧದಲ್ಲಿ ದೇಶದ ಅನೇಕ ಕಡೆಗಳಲ್ಲಿ ಸಭೆಗಳೂ, ಪ್ರಾರ್ಥನೆಗಳೂ ನಡೆಯಿತು. ಕೆಲವೆಡೆಗಳಲ್ಲಿ ದಸ್ತಗಿರಿಗಳಾಗಿವೆ.

ಬರ್ಮಾ ಕದನ ಕೊನೆಮುಟ್ಟಿತು

ರಂಗೂನ್ — ಇಂದಿಗೆ ಬರ್ಮಾದಲ್ಲಿ ಜಪಾನಿಗಳ ಆಟ ಮುಗಿಯಿತು. ಜಂಬನೆಲ್ಲ ನಿರ್ನಾಮವಾಯಿತು. ಸಿತ್ತಾಂಗ್ ನದಿಯ ಪಶ್ಚಿಮಕ್ಕೆ ಅವರ ಹರಕು ಮುರುಕು ಸೇನೆ ಅಲ್ಲಷ್ಟು ಇಲ್ಲಷ್ಟು ಅಂಟಿಕೊಂಡಿವೆ ಇಷ್ಟೆಲ್ಲೇ ಆದರೂ ನಾಶವಾಗದಿರಲ್ಲಿದೆ.

ಂ ಂ

ಟ್ರಾಫಿಕ್ ಬೋರ್ಡ್‌ನ ರದ್ದು

ನಂದಿನ ಸೆಪ್ಟಂಬರ್‌ನಿಂದ ಗಳಿಗೆಯಲ್ಲಿ ರಚಿಸಿದ ಮೈಸೂರು ಟ್ರಾಫಿಕ್ ಬೋರ್ಡನ್ನು ರದ್ದು ಪಡಿಸುವುದಾಗಿ ಸರ್ಕಾರದ ಪ್ರಕಟಣೆ ಆಗಿದೆ.

ರಿ ಂ

ಮದ್ರಾಸಿನಲ್ಲಿ ದಸ್ತಗಿರಿ

ಹಸ್ತ ಪತ್ರಿಕೆಗಳನ್ನು ಹಂಚಿದರೆಂದು ಮತ್ತು ರಸ್ತೆಯಮೇಲೆ ಅಂಟಿಸಿದರೆಂದೂ ಮದ್ರಾಸಿನಲ್ಲಿ 7 ದಸ್ತಗಿರಿಗಳು 9 ನೇ ತಾರೀಖು ನಡೆದವು.

ಂ ಂ

ಮುಂದುಹಾಕಲ್ಪಟ್ಟಿದೆ

ಮೈಸೂರಿನಲ್ಲಿ ವೆಂಬಣಿಗೆ ಮುಂತಾದುವುಗಳು ನಡೆಯಕೂಡದೆಂದಿರುವುದರಿಂದ ಮೈ || ಕಾಂ | ಅಧ್ಯಕ್ಷರಿಗೆ ನಿಧಿ ಸಮರ್ಪಿಸುವ ದಿವಸವನ್ನು ಮುಂದುಹಾಕಲಾಗಿದೆ.

ಂ ಂ

ಅಟಾಮಿಕ್ ಬಾಂಬ್ ಹಾವಳಿ

ಲಂಡನ್, ಆ 8 — ಅಟಾಮಿಕ್ ಬಾಂಬ್ ಟಿಕ್ಕ ರಬ್ಬರ್ ಚೆಂಡಿನಷ್ಟಿದ್ದರೂ ಅದು ಮಾಡುವ ಹಾನಿ ಸಂಪೂರ್ಣವಾಗಿದ್ದು ಊಹಾತೀತ ಪೂರ್ಣ ನಾಶ ಮಾಡುವ ಶಕ್ತಿಯುಳ್ಳದ್ದಾಗಿರುವುದೆಂದು ಈವನಿಂಗ್ ಸ್ಟಾಂಡರ್ಡ್ ಪತ್ರಿಕಾ ವಾತ್ತಿದಾರರಾದ ಮಿಸ್ಟರ್ ಕುಕ್‌ರವರು ವರದಿ ಮಾಡಿದ್ದಾರೆ.

ಜಪಾನ್ ಶರಣಾಗತವೇ ?

ರಷ್ಯಾ-ಜರ್ಮಾ ಯುದ್ಧ

ಕಟ್ಟ ಕಡೆಗೆ ರಷ್ಯಾ ಜರ್ಮಾ ಮೇಲೆ ಯುದ್ಧ ಹೂಡಿಯೇ ಬಿಟ್ಟಿತು. ಹೀಗೆ ರಷ್ಯಾ ಮಾಡಿರುವುದಕ್ಕೆ ಮಿತ್ರರ ಕೋರಿಕೆಯೂ, ಪೋಸ್ಡಾಂ ತೀರ್ಮಾನವೂ ಮತ್ತು ಯುದ್ಧವನ್ನು ಬೇಗ ಮುಗಿಸಲೂ ಕಾರಣಗಳಾಗಿವೆಯೆಂದು ರಷ್ಯದ ಹೇಳಿಕೆಯಾಗಿದೆ. ಯುದ್ಧ ಹೂಡಿ ಎರಡೇ ದಿನಗಳಾದರೂ ರಷ್ಯವು ಮಂಜೂರಿಯಾ, ಮಂಗೋಲಿಯಾ ಗಡಿಗಳಲ್ಲಿ ಅನೇಕ ಮೈಲಿಗಳನ್ನು ದಾಟಿ, ನಾಲ್ಕಾರು ಜಪಾನ್ ಪಟ್ಟಣಗಳನ್ನಾಕ್ರಮಿಸಿದೆ. ವ್ಲಾಡಿವೋಸ್ಟಾಕ್ ಭಾಗದಲ್ಲೂ ರಷ್ಯಾ ಕಾರ್ಯಾಚರಣೆ ಜೋರಾಗಿದೆ. ಜಪಾನರು ರಷ್ಯದ ಗಡಿ ಪ್ರವೇಶಿಸದಂತೆ ಚೈನಾ ಮತ್ತು ಮಿತ್ರ ಪಡೆಗಳು ಅತ್ತ ಕಡೆಯಲ್ಲಿನ ಜಪಾನಿ ಸೈನ್ಯಗಳ ಮೇಲೆ ಧಾಳಿ ನಡೆಸಿ ಆಡ್ಡಿಪಡಿಸುತ್ತಿರುತ್ತಾರೆ. ಅಟೋಮಿಕ್ ಬಾಂಬಿನ ಹಾವಳಿಯೇ ಜಪಾನಿನ ಸರ್ವನಾಶಕ್ಕೆ ಸಾಕಾಗಿರುವಾಗ ಇನ್ನು ರಷ್ಯವೂ ಮೇಲೆ ಬಿದ್ದನೆಲೆ ಜಪಾನು ಶೀಘ್ರದಲ್ಲೇ ಶರಣಾಗತವಾಗಿ ಯುದ್ಧ ನಿಲ್ಲುವುದರಲ್ಲೇನೂ ಸಂದೇಹವಿಲ್ಲ.

ಜಪಾನ್ ಶರಣಾಗತವೇ ?

ನ್ಯೂಯಾರ್ಕ್, ಆ 10 ಮತ್ತು ಲಂಡನ್ ಆ 10 — ಜಪಾನರು ತಾವು ಪೋಸ್ಡಾಂ ತೀರ್ಮಾನದಂತೆ ಶರಣಾಗತರಾಗಲು ಒಪ್ಪುವುದಾಗಿಯೂ, ಅಡರೆ ಮಿಕಾಡೋ ಚಕ್ರವರ್ತಿಗಳು ದೊಡ್ಡಸ್ತಿಕೆ ಮತ್ತು ಜಬರುದಸ್ತಿಗೆ ಭಾಧಕವಾಗಿ ಕೂಡದೆಂದೂ ತಿಳಿಸಿರುವುದಾಗಿ ವರದಿಯಾಗಿದೆ. ಈ ರೀತಿ ಹೇಳಿಕೆಯನ್ನು ಜಪಾನರು ಸ್ವಿಸ್ ಮತ್ತು ಸ್ವೀಡಿಷ್ ಸರ್ಕಾರಗಳಿಗೆ ಕಳುಹಿಸಿ, ಅದನ್ನು ಸಂ. ಅಮೇರಿಕಾ ಬ್ರಿಟನ್ನು ಚೈನಾ ಮತ್ತು ರಷ್ಯಾಕ್ಕೆ ತಿಳಿಸುವಂತೆ ಕೋರಿರುವು

ಲಂಡನ್ ಆ 9 — ಟೋಕಿಯೋನಿಂದ ಜಪಾನ್ ವಾರ್ತಾ ಸಂಸ್ಥೆಯು ಜಪಾನ್ ವಿದೇಶಾಂಗ ಮಂತ್ರಿ ಸಿಗನೋರಿಟೋಜೋವು ರಷ್ಯಾದ ರಾಯಭಾರಿ ಜಾಕಬ್ ಮಾಲಿಕರನ್ನು ಮಾತುಕತೆಗೆ ಬರಮಾಡಿಕೊಳ್ಳುತ್ತಾರೆಂದು ತಿಳಿಸಿದೆ

ವಾಷಿಂಗ್‌ಟನ್ ಆ 9 — ಜಪಾನರಿಗೂ ಮಿತ್ರರಿಗೂ ಒಸ್ಪಂದದ ಮಾತುಕತೆಗಳು ನಡೆಯುತ್ತಿರುವುದೆಂದು ಇಲ್ಲಿ ನಂಬಲಾಗಿದೆ. ಈ ವಿಷಯದ ಪ್ರೆಸ್ ಸೆಕ್ರಟರಿ ಎ|| ರಾಷ್ ಏನನ್ನೂ ತಿಳಿಸಲಿಲ್ಲ.

ಅಟೊಮಿಕ್ ಬಾಂಬಿನ ಅದ್ಭುತ ಶಕ್ತಿ !

ಒಂದು ಕೋಳಿ ಮೊಟ್ಟೆ ಗಾತ್ರದ ಅಟಾಮಿಕ್ ಬಾಂಬು ನ್ಯೂಯಾರ್ಕ್ ಪಟ್ಟಣವನ್ನು ನಾಶಮಾಡಬಲ್ಲದೆಂದು ಹೇಳಲಾಗಿದೆ.

ಅಟೋಮಿಕ್ ಬಾಂಬಿನ ಜೆಂಕಿ ಝಳವು 6 ಮೈಲಿ ದೂರದಲ್ಲಿದ್ದ ಒಬ್ಬನನ್ನು ಕುರುಡನನ್ನಾಗಿ ಮಾಡಿಬಿಟ್ಟಿತೆಂದು ಈ ಬಾಂಬು ತಯಾರಿಯಲ್ಲಿ ಸಹಾಯ ಮಾಡಿದ ಹಾರ್ವರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ || ಲೀಲ್‌ರವರು ಹೇಳಿರುವರು.

AT Opera—

MUJARIM

ಅಪೇರಾ ಟಾಕೀಸ್

ಮೋತೀಲಾಲ್, ಲೀಲಾದೇಸಾಯ್, ಯಾಕೂಬ್, ಜಗದೀಶ್

ಪಾತ್ರವಹಿಸಿರುವ

ಮುಜರಿಂ

ಪ್ರತಿ ದಿನ 3 ಆಟಗಳು .... ಹಿಂದೀ ಭಾಷೆ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೧೬೭ ಚಾಮರಾಜಪುರಂ ಮೈಸೂರು.

3 ನೇ ವಾರ

At Ranjit

RONAQ

ರಣಜಿತ್ ಟಾಕೀಸಿನಲ್ಲಿ

ಮೋತಿಲಾಲ್ ಚಂದ್ರಮೋಹನ್

ಚಾರ್ಲಿ

ಚಂದ್ರಪ್ರಭಾ ಸ್ವರ್ಣಲತಾ

ಪಾತ್ರವಹಿಸಿರುವ

ರೊನಕ್

(ಹಿಂದಿ)

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರುಗಳು ಬೇಕಾಗಿರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ ಮೈಸೂರು

For Good Printing—

L. N. Press

Srirampet MYSORE

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಸನಾತನ ಧರ್ಮದ ವೈಶಿಷ್ಟ್ಯ !

ಈ ಕೆಳಗಿನ ಸಂಗತಿಯು ಹೋದವಾರ ಕೇರಳದಲ್ಲಿ ಜರುಗಿದೆ. ಒಂದು ಹಳ್ಳಿ.. ಒಬ್ಬ ನಿನ್ನ ಜಾತಿಯವನ ಹುಡುಗನು ಹೊಲದಲ್ಲಿ ದನಗಳನ್ನು ಕಾಯುತ್ತಿದ್ದ. ಒಂದು ಎಮ್ಮೆಯು ರೋಡಿಗೆ ಬಂದಿತು. ಅದನ್ನು ತಿರುಗಿಸಿಕೊಂಡು ಹೋಗಲು ಆ ಹುಡುಗ ರೋಡಿಗೆ ಬಂದ. ಅದೇ ಹೊತ್ತಿನಲ್ಲಿ ಆ ರೋಡಿನ ಮೇಲೆ ಒಬ್ಬ ' ಸನಾತನಿ ' ಹೋಗುತ್ತಿದ್ದ. ಒಬ್ಬ ನಿನ್ನ ಜಾತಿಯ ಹುಡುಗನು ತನ್ನ ಸಮೀಪಕ್ಕೆ ಬಂದಿದ್ದರಿಂದ ಆ ಸನಾತನಿಗೆ ಮೈಲಿಗೆಯಾಯಿತು. ಹಾಗೂ ಮೈಲಿಗೆಯಾಯಿತು, ಹೀಗೂ ಮೈಲಿಗೆಯಾಯಿತು ಎಂದು ಆ ಸನಾತನಿಯು ಹುಡುಗನ ಹಿಂಬಾಲಕರು ಹುಡುಗನನ್ನು ಬಲ್ಮಗಳಿಂದ ಆ ಹುಡುಗನನ್ನು ಜೀವಾಗಿ ಥಳಿಸಿದರು. ಆ ಹುಡುಗನ ಮೈ ತುಂಬಾ ಬಾಸಾಳಗೆಳಾದವು. ಅವನು ನಿಶ್ಚೇಷ್ಟಿತನಾಗಿ ಬಿದ್ದುಬಿಟ್ಟನು. ಆ ಹಳ್ಳಿಯ ಮುಖಂಡರು ಅಲ್ಲಿಗೆ ಬಂದು ಆ ಹುಡುಗನನ್ನು ಉಪಚರಿಸಿ ತಮ್ಮ ಮನೆಯಿಂದಿಗೆ ಕರೆದುಕೊಂಡುಹೋಗಿ ಅವನನ್ನು ಮುಸಲ್ಮಾನನನ್ನಾಗಿ ಮಾಡಿದರು. ಅವನಿಗಿದ್ದ ಸನಾತನಿ ದೇವರ ಹೆಸರು ಮಾಯವಾಯಿತು ಆ ಸನಾತನಿ ದೇವರ ಸಂಗಡ ಅವನ ಅಸ್ಪೃಶ್ಯತೆಯೂ ಕೂಡ ಮಾಯವಾಗಿಬಿಟ್ಟಿತು ಮರುದಿನ ಅವನು ಆ ಹಳ್ಳಿಯಲ್ಲೆಲ್ಲಾ ತಿರುಗಾಡಿದನು. ಹಿಂದಿನ ದಿನ ಅವನನ್ನು ಥಳಿಸಿದವರೇ ಈಗ ಅವನನ್ನು ನೋಡಿ ತಲೆತಗ್ಗಿಸಿದರು. ಅವನು ಸ್ಪೃಶ್ಯನಾದ. ಎಲ್ಲರಂತೆ ಅವನು ತಲೆಯೆತ್ತಿಕೊಂಡು ತಿರುಗಾಡಲು ಪ್ರಾರಂಭಿಸಿದ. ಸನಾತನೀ ದೇವರುಗಳನ್ನು ಹಿಯ್ಯಾಳಿಸುವವರ ಸಂಖ್ಯೆಯಲ್ಲಿ ಒಬ್ಬನು ಹೆಚ್ಚಾದ ! ಇದೇ ಸನಾತನೀ ಧರ್ಮದ ವೈಶಿಷ್ಟ್ಯ (ನ. ಸಂ.)

ಸಿಮ್ಲಾ ಸಮಾವೇಶನ

ಕಾಂಗ್ರೆಸ್ಸು ಲೀಗುಗಳಲ್ಲಿ, ಕಾಂಗ್ರೆಸ್ ರಾಜಕೀಯ ಪಕ್ಷ, ಲೀಗು ಕೇವಲ ಮತೀಯ ಪಕ್ಷವೇ ಹೊರತು ರಾಜಕೀಯ ಪಕ್ಷವಲ್ಲ ಎರಡೂ ರಾಜಕೀಯ ಪಕ್ಷಗಳಾಗಿದ್ದಲ್ಲಿ ರಾಷ್ಟ್ರಭಾರಗಳಿಗೆ ಅವಕಾಶವಿರಬಹುದಾಗಲೀ, ಒಂದು ಮತವನ್ನು ಪ್ರತಿಪಾದನೆ ಮಾಡುವಂಥಾದ್ದು, ಮತ್ತೊಂದು ರಾಜಕೀಯವಾದದ್ದು ಆಗಿರುವಾಗ ಈ ಎರಡಕ್ಕೂ ರಾಜಿಯಾಗುವುದೆಂಬುದು ಪರಿಹಾಸಾಸ್ಪದವಾದದ್ದು,

ಲೂಜ್ ವೇಲೆ ಆಮೇರಿಕ ಸೈನ್ಯ ನುಗ್ಗಿದ ರೀತಿ